**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ. ಎಮ್. ಎಫ್. ಸಿ. ನ್ಯಾಯಾಲಯ, ಜೇವರ್ಗಿ.**

**ಸಿಸಿ ನಂ. 117/2018**

**ಚಾಸಾ-28/ಫ್ರಾಸಾ-24**

| | |
|---|---|
| **ಹೆಸರು** | ಲಕ್ಷ್ಮಣರಾವ |
| **ತಂದೆ ಹೆಸರು** | ಶಿವಪ್ಪ ಬಿರಾದರ |
| **ವಯಸ್ಸು** | 63 ವರ್ಷ |
| **ಉದ್ಯೋಗ** | ನಿವೃತ್ತ ಸಹಾಯಕ ಉಪ ನಿರೀಕ್ಷಕರು, ಜೇವರ್ಗಿ ಪೊಲೀಸ ಠಾಣೆ |
| **ವಾಸ ಸ್ಥಳ** | ಜಮಖಂಡಿ. |

**ಸಾಕ್ಷಿಯನ್ನ ದಿನಾಂಕ 05-10-2019 ರಂದು ಸಾಕ್ಷಿಯನ್ನ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭೀಯೋಜಕರಿಂದ.**

ನಾನು ಮೇ–2014 ರಿಂದ ಜೂನ್–2016 ರವರೆಗೆ ಜೇವರ್ಗಿ ಪೊಲೀಸ ಠಾಣೆಯಲ್ಲಿ ಸಹಾಯಕ ಆರಕ್ಷಕ ಉಪ–ನೀರಿಕ್ಷಕನಾಗಿ ಕೆಲಸ ಮಾಡಿರುತ್ತೇನೆ.

ದಿನಾಂಕ 22-10-2009 ರಂದು ಪ್ರಕರಣದ ಕಡತವನ್ನ ಚಾಸಾ-27 ರವರಿಂದ ಪಡೆದು ಪರಿಶೀಲಿಸಿ ಮುಂದಿನ ತನಿಖೆಯನ್ನ ಕೈಗೊಂಡಿರುತ್ತೆನೆ.

ಅದೇ ದಿನ ಗುಲಬರ್ಗಾದ ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಿಂದ 1 ನೇ ಆರೋಪಿತನಾದ ಸಿದ್ದಪ್ಪನ ಜಾಮೀನು ಆದೇಶದ ಪ್ರತಿಯನ್ನ ಸ್ವಿಕರಿಸಿರುತ್ತೇನೆ. ಅದೇ ದಿನ 1 ನೇ ಆರೋಪಿಯು ನನ್ನ ಮುಂದೆ ಹಾಜರಾಗಿರುತ್ತಾನೆ. ಆತನನ್ನ ನಾನು ವಿಚಾರಣೆಗೆ ಒಳಪಡಿಸಿದ್ದು ತಾನು ಅಪರಾಧ ಮಾಡಿದ ಬಗ್ಗೆ ನನ್ನ ಮುಂದೆ ಒಪ್ಪಿಕೊಂಡಿರುತ್ತಾನೆ. 1 ನೇ ಆರೋಪಿಯು ಯೋಗ್ಯ ಜಾಮೀನು ನೀಡಿದ್ದರಿಂದ ಆತನನ್ನ ಗೌರಾನ್ವಿತ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಆದೇಶದ ಮೇರೆಗೆ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. 1 ನೇ ಆರೋಪಿಯನ್ನ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ 1 ನೇ ಆರೋಪಿಯನ್ನ ಗುರುತಿಸಿರುತ್ತಾರೆ.

ಪ್ರಕರಣದ ಕಡತವನ್ನ ಮುಂದಿನ ತನಿಖೆಗಾಗಿ ಚಾಸಾ-29 ರವರಿಗೆ ಹಸ್ತಾಂತರಿಸಿರುತ್ತೇನೆ.

**ಪಾಟೀ ಸವಾಲುಃ 1 ನೇ ಆರೋಪಿ ಪರ ವಕೀಲರಾದ ಶ್ರೀ ಬಿ . ಕೆ. ಗುಳಗಿಯವರಿಂದ.**

ನಾನು 14 ವರ್ಷ ಜೇವರ್ಗಿ ತಾಲೂಕಿನಲ್ಲಿ ಕೆಲಸ ಮಾಡಿರುತ್ತೇನೆ. 1 ನೇ ಆರೋಪಿ ನನಗೆ ಪರಿಚಿತ ಎಂದರೆ ಸರಿ. 1 ನೇ ಆರೋಪಿಯನ್ನ ನಾನು ವಿಚಾರಣೆಗೆ ಒಳಪಡಿಸಿದ್ದೇನೆ ಮತ್ತು ಅಪರಾಧ ಮಾಡಿದ ಬಗ್ಗೆ ಆತ

ಒಪ್ಪಿಕೊಂಡಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** 2 ನೇ **ಆರೋಪಿ ಪರ** ವಕೀಲರಾದ ಶ್ರೀ ಸಲೀಂ ಪಟೇಲರವರಿಂದ – ಇರುವುದಿಲ್ಲ.
**ಮರು ವಿಚಾರಣೆಃ** **ಇರುವುದಿಲ್ಲ.**
**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**
**ಓ.ಹೇ.ಕೆ.ಸರಿ.ಇದೆ.**

**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು,**
**ಜೇವರ್ಗಿ**